## ಮೆಲಿಸ್ಸಾ ನಂಗರೆ
## ಕವಿತೆಗಳು

1
ಕವಿಗಳು

ಹುಲಿಗಳು ಮತ್ತು ನಾಯಿಗಳು
ದೆವ್ವಗಳು ಮತ್ತು ದೇವತೆಗಳು
ದೇವರ ದಯೆಯಿಂದ
ಕೂಡು ಕುಟುಂಬವಾಗಲು ಒಟ್ಟಿಗೆ ಬಂದವರು



2
ಗಾಳಿಯಲ್ಲಿ ಪತ್ತುಗುಡುವುದು ಬೀದಿ

ಬೀದಿ ಗಾಳಿಯಲ್ಲಿ ಸೂಂಯ್
ಗುಡುತ್ತದೆ.
ಸಮಸ್ತ ಬಿರುಗಾಳಿ
ಬೀಸಿ ಹೋಗಿದೆ
ಕಡು ಕೋಪದ
ಒಂದು ನೋಟದಲಿ

ನದಿ ಶ್ವಾಸವನು ಸಂಧಿಸುವುದು
ಒಂದು ಹೂವಿನ ಗುಂಟ
ಸುಗಂಧ ತೊರೆದ ಹೂವಿಗೆ
ಈಗ ಏನೆಂದು ಹೆಸರಿಡುವುದು

ಒಂದು ಹೂವಿಗಾಗಿ
ನದಿ ರೋದಿಸುವುದು
ಮತ್ತು ಉದ್ಯಾನವನಗಳು
ಕಣ್ಮರೆಯಾಗುವವು
ಪ್ರತಿ ಕಣ್ಣೀರಿನಲ್ಲೂ

3
ನಾನೇ ಸ್ವರ್ಗ
ನಿಜಗಣ್ಣಿನ ಕೈಲಾಸ
ಯಾವ ಗುಪ್ತ ಕಲ್ಪನೆಯಿಂದ
ಅರಿವಿನ ಇಂದ್ರಿಯಗಳು ತಮ್ಮ
ರೆಕ್ಕೆಯೊಡೆದು ಹಾರುವವೋ
ಅಲ್ಲಿಂದ ಬಂದಿರುವೆ